EP No.34/2023
PW.2

ಇಂದು ದಿನಾಂಕ: 11-08-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲು: Learned counsel for 3rd party applicant/objector:**

ಸದರಿ ಬ್ಯಾಂಕಿನಲ್ಲಿ ನಾನು ಕಳೆದ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಇದಕ್ಕೂ ಮುಂಚೆ ಯಾದಗಿರಿಯ ಇದೇ ಬ್ಯಾಂಕಿನ ಶಾಖೆಯಲ್ಲಿ ಕ್ರೆಡಿಟ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೆ. ಈಗ ನಾನು ಈ ಬ್ಯಾಂಕಿನಲ್ಲಿ ಕ್ರೆಡಿಟ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ನಮ್ಮ ಬ್ಯಾಂಕಿನ ಪ್ರತಿನಿತ್ಯದ ವ್ಯವಹಾರಗಳ ವಿಭಾಗದಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿ. ನನಗೆ ನಮ್ಮ ಬ್ಯಾಂಕುಗಳಿಗೆ ಗ್ರಾಹಕರು ಬಂದರೆ ಅವರಿಗೆ ಯಾವ ರೀತಿಯ ಸೇವೆಗಳನ್ನು ಒದಗಿಸಬೇಕೆಂಬ ಬಗ್ಗೆ ಮಾಹಿತಿ ಇರುತ್ತದೆ.

2018 ರಲ್ಲಿ ನಮ್ಮ ಶಾಖೆಯಲ್ಲಿ ಯಾರು ಮ್ಯಾನೇಜರ್ ಆಗಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-10 ನ್ನು ನಮ್ಮ ಸದರಿ ಸಮಯದಲ್ಲಿ ಕೆ.ವೈ.ಸಿ. ವೇರಿಫಿಕೇಷನ್ ಗೆ ಇದ್ದ ನಮ್ಮ ಶಾಖೆಯ ಸಿಬ್ಬಂದಿಗಳು ಭರ್ತಿ ಮಾಡಿರುತ್ತಾರೆ. ಅದೇ ರೀತಿ ನಿಪಿ-9 ನ್ನು ಸಹ ನಮ್ಮ ಶಾಖೆಯ ಸಿಬ್ಬಂದಿಗಳು ಭರ್ತಿ ಮಾಡಿರುತ್ತಾರೆ. ಬೇಕಾದ ದಾಖಲೆಗಳು ಸಹ ನಮ್ಮ ಶಾಖೆಯ ಸಿಬ್ಬಂದಿಗಳೇ ಪರಿಶೀಲನೆ ಮಾಡಿರುತ್ತಾರೆ. ಹಾಗೆ ಪರಿಶೀಲಿಸಿದ ನಂತರ ಅವುಗಳನ್ನು ಪರಿಶೀಲಿಸಲಾಗಿದೆ ಎಂದು ಹಿಂಬರಹ ಬರೆಯುತ್ತಾರೆ ಎಂದರೆ ಕೆ.ವೈ.ಸಿ.ಮತ್ತು ನಿಪಿ-10 ರಲ್ಲಿಯೂ ಸಹ ನಮ್ಮ ಆಫೀಸಿನ ಸೀಲ್ ಹಾಕಿ ಹಿಂಬರಹ ಮಾಡುತ್ತಾರೆ. ನಿಪಿ-9 ಮತ್ತು 10 ರಲ್ಲಿ ನಮ್ಮ ಮ್ಯಾನೇಜರ್ ನ ಅಥವಾ ನಮ್ಮ ಶಾಖೆಯ ಸಿಬ್ಬಂದಿಗಳ ಸೀಲ್ ಅಥವಾ ಸಹಿ ಇಲ್ಲ ಎಂದರೆ ಸರಿ. ತಾಯಮ್ಮರವರ ಹೆಬ್ಬಟ್ಟಿನ ದಾಖಲೆಗಳನ್ನು ಡಿಕ್ರಿದಾರರಿಗೆ ಸಹಾಯ ಮಾಡಲು ಸೃಷ್ಟಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-9 ಮತ್ತು 10 ನ್ನು ಸಂಪೂರ್ಣವಾಗಿ ಭರ್ತಿ ಮಾಡಿಲ್ಲ ಎಂದರೆ ಸರಿ. ನಿಪಿ-11 ಮತ್ತು 12 ನ್ನು ಸಹ ನಾನು ಸಹಿಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಡಿಕ್ರಿದಾರರಿಗೆ ಸಹಾಯ ಮಾಡಲು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.